# ಅಂಗನವಾಡಿ ಕೇಂದ್ರದಲ್ಲೊಂದು ದಿನ

ಯೋಗೇಶ್ ಸಿ.ಆರ್.

ಮಗುವಿನ ಸ್ವಾಸ್ಥ್ಯ, ಬೆಳವಣಿಗೆ ಹಾಗು ಆರೋಗ್ಯಕರ ವಿಕಾಸಕ್ಕೆ ಆಟ ಅತ್ಯವಶ್ಯಕ. ಇತಿಹಾಸದಲ್ಲೇ ಅತಿ ವ್ಯಾಪಕವಾಗಿ ಅಂಗೀಕರಿಸಲ್ಪಟ್ಟ ಮಾನವ ಹಕ್ಕುಗಳ ಒಡಂಬಡಿಕೆ ಎನ್ನಲಾಗುವ ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಅಧಿವೇಶನದ ನಿಯಮಾವಳಿ 31ರಲ್ಲಿ (United Nations Convention on the Rights of the Child –UNCRC 1989) ಮಗುವಿನ 'ಆಟ ಆಡುವ ಹಕ್ಕಿನ' (Right to play) ಕುರಿತು ಒತ್ತಿಹೇಳಲಾಗಿದೆ[i]. ಮಕ್ಕಳ ಆರಂಭಿಕ ವರ್ಷಗಳ ಪಠ್ಯಕ್ರಮ, ಬೋಧನಾ ವಿಧಾನ ಹಾಗು ಮೌಲ್ಯಮಾಪನ ಪ್ರಕ್ರಿಯೆಗಳಲ್ಲಿ ಆಟವು ಪ್ರಧಾನ ಸ್ಥಾನವನ್ನು ಪಡೆದಿದ್ದು, ಮಕ್ಕಳ ಕಲಿಕೆ ಮತ್ತು ಬೆಳವಣಿಗೆಗೆ ಕೊಡುಗೆ ನೀಡುತ್ತದೆ.

ಅವಿಭಕ್ತ ಕುಟುಂಬದಿಂದ ವಿಭಕ್ತ ಕುಟುಂಬಕ್ಕೆ ಕೌಟುಂಬಿಕ ರಚನೆಯು ಬದಲಾಗಿರುವುದರ ಜೊತೆಗೆ ಪೋಷಕರಿಬ್ಬರೂ ಕೆಲಸಕ್ಕೆ ಹೋಗುವಂತಹ ಜೀವನಶೈಲಿ ಹಾಗು ಮಕ್ಕಳ ಶೈಕ್ಷಣಿಕ ವಿಚಾರಕ್ಕೆ ಹೆಚ್ಚು ಒತ್ತು ನೀಡಿರುವುದು ಎಲ್ಲವೂ ಸೇರಿ ಮಗುವಿಗೆ ಆಟವಾಡಲು ದೊರೆಯುವ ಸಮಯವು ಕಡಿತಗೊಂಡಿದೆ. ಈ ವಿಚಾರದಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳಿಗಿಂತಲೂ ನಗರ ಪ್ರದೇಶದ ಮಕ್ಕಳು ಹೆಚ್ಚು ಬಾಧಿತರಾಗಿದ್ದಾರೆ. ಹೀಗಾಗಿ, ಅನೇಕ ಸೌಲಭ್ಯಗಳ ನಡುವೆಯೂ, ಬಹುಪಾಲು ಮಕ್ಕಳಿಗೆ ಆಟಕ್ಕೆ ಸಿಗುವ ಸಮಯದಲ್ಲಿ ಗಣನೀಯ ಕಡಿತವಾಗಿದೆ.

### ಆರಂಭಿಕ ವರ್ಷಗಳ ಬೋಧನಾ ವಿಧಾನದಲ್ಲಿ ಕ್ರೀಡೆಯ ಪ್ರಾಮುಖ್ಯತೆ

ಚಿಕ್ಕ ಮಕ್ಕಳಿಗೆ ಆಟವಾಡುವ ಬಯಕೆ ಹಾಗು ಸಾಮರ್ಥ್ಯಗಳು ಅಂತರ್ಗತವಾಗಿರುವ ಕಾರಣದಿಂದ ಅವರನ್ನು ಆಟವಾಡುವಂತೆ ಮಾಡಲು ಯಾವುದೇ ಬಾಹ್ಯ ಪ್ರೇರಣೆಯ ಅಗತ್ಯವಿಲ್ಲ. ತಮ್ಮ ಸುತ್ತಲಿನ ಜಗತ್ತನ್ನು ಅವರು ಅರ್ಥೈಸಿಕೊಳ್ಳುವ ಸಾಧನವೇ ಆಟವಾಗಿದೆ. ಅವರ ಸಂವೇದನಾತ್ಮಕ, ದೈಹಿಕ, ಸಾಮಾಜಿಕ ಹಾಗು ಭಾವನಾತ್ಮಕ ಸ್ವಾಸ್ಥ್ಯವು ಆಟದಿಂದ ವೃದ್ಧಿಯಾಗುವುದೇ ಅಲ್ಲದೆ, ಅವರ ವಿಕಾಸಕ್ಕೂ ಅದು ಅತ್ಯಗತ್ಯವಾಗಿದೆ. 2020ರ ರಾಷ್ಟ್ರೀಯ ಶಿಕ್ಷಣ ನೀತಿಯು (National Education Policy (NEP) 2020) ಈ ವಿಚಾರಕ್ಕೆ ಒತ್ತು ನೀಡುತ್ತಾ, ಆರಂಭಿಕ ಬಾಲ್ಯ ಪೋಷಣೆ ಮತ್ತು ಶಿಕ್ಷಣವು (Early Childhood Care and Education -ECCE) ತಾತ್ತ್ವಿಕವಾಗಿ ಆಟ ಹಾಗು ಚಟುವಟಿಕೆಯನ್ನು ಆಧಾರವನ್ನಾಗಿರಿಸಿಕೊಂಡು ಒಳಾಂಗಣ ಮತ್ತು ಹೊರಾಂಗಣ ಆಟಗಳೆರಡನ್ನೂ ಸರಾಗವಾಗಿಸಬೇಕು ಎಂದು ವಿವರಿಸುತ್ತದೆ. ಆಟವು ಶಿಶು-ಕೇಂದ್ರಿತವಾಗಿ ಇರಬೇಕಿದ್ದು, ಮಕ್ಕಳು ಆಟವಾಡುವುದರಲ್ಲಿ ಸಂತೋಷವನ್ನು ಅನುಭವಿಸಬೇಕು. ಮಕ್ಕಳು ಚಿಂತನೆ ಹಾಗು ಪ್ರಶ್ನೆಗಳ ಮೂಲಕ ತಮ್ಮ ಪರಿಸರವನ್ನು ಶೋಧಿಸಿ ತಮ್ಮ ಕುತೂಹಲವನ್ನು ತಣಿಸುವ ವಿಧಾನಗಳನ್ನು ಕಂಡುಕೊಳ್ಳುವಂತೆ ಅದು ಮಾಡಬೇಕು.

ಶಿಕ್ಷಕರ ಸಮಯವನ್ನು ಆಧರಿಸಿ ಆಟವನ್ನು ಮುಕ್ತ ಆಟ (free play) ಮತ್ತು ಮಾರ್ಗದರ್ಶಿತ ಆಟ (guided play) ಎಂದು ಎರಡು ಸ್ಥೂಲ ವರ್ಗಗಳಾಗಿ ವಿಂಗಡಿಸಬಹುದಾಗಿದೆ. ಮುಕ್ತ ಆಟದಲ್ಲಿ ಮಗುವೇ ತಾನು ಏನನ್ನು, ಹೇಗೆ ಆಡಬೇಕು ಎಂಬುದನ್ನು ನಿರ್ಧರಿಸುತ್ತದೆ ಮತ್ತು ನಿಯಂತ್ರಿಸುತ್ತದೆ. ಇದರಲ್ಲಿ ಶಿಕ್ಷಕರು ತಟಸ್ಥ ವೀಕ್ಷಕರಷ್ಟೇ. ಆದರೆ ಮಾರ್ಗದರ್ಶಿತ ಆಟದಲ್ಲಿ ಒದಗಿಸಲಾದ ಕಲಿಕಾ ಪರಿಸರದ ಒಳಗೆ ಶಿಕ್ಷಕರು ಕೂಡಾ ಓರ್ವ ಆಟಗಾರರಾಗಿ ಮಗುವಿನೊಡನೆ ಸಹಕಾರಿ ಭಾವನೆಯೊಂದಿಗೆ ಆಡುತ್ತಾರೆ. ಇದಲ್ಲದೆ, ಮಕ್ಕಳು ಆಟವನ್ನು ಎಲ್ಲಿ ಆಡುತ್ತಾರೆ ಎಂಬುದರ ಮೇಲೆ ಅದನ್ನು ಒಳಾಂಗಣ ಹಾಗು ಹೊರಾಂಗಣ ಆಟ ಎಂದು ವರ್ಗೀಕರಿಸಬಹುದು. ಮಕ್ಕಳಿಗೆ ಹೊಸ ಕಲಿಕಾ ಅವಕಾಶಗಳನ್ನು ಒದಗಿಸಿಕೊಡಲು ಮತ್ತು ಅದಾಗಲೇ ಕಲಿತಿರುವುದನ್ನು ಸಂಯೋಜಿಸಲು ಶಿಕ್ಷಕರು ಆಟದ ಈ ವಿಭಾಗಗಳ ನಡುವೆ ಸಮತೋಲನ ಮತ್ತು ಸಮರ್ಪಕ ಮಿಶ್ರಣವನ್ನು ಸಾಧಿಸಬೇಕಿದೆ. ಆಟದ ಮೂಲಕ ಕ್ರಮಬದ್ಧ ಕಲಿಕೆ ಸಾಧ್ಯವಾಗಲು ಶಿಕ್ಷಕರು ಸಾಕಷ್ಟು ಮುಂಚಿತವಾಗಿ ಆಟದ ಚಟುವಟಿಕೆಗಳನ್ನು ಆಯೋಜಿಸಿ ಸಿದ್ಧಗೊಳಿಸಿಕೊಳ್ಳುವ ಅಗತ್ಯವಿದ್ದು, ಮಾರ್ಗದರ್ಶಿತ ಆಟದ ಅವಧಿಯಲ್ಲಿ ಮಕ್ಕಳಿಗೆ ಸೂಕ್ತ ಸೂಚನೆಗಳನ್ನು ನೀಡಿ ಆಟವನ್ನು ಸುಗಮಗೊಳಿಸಬೇಕಾಗುತ್ತದೆ.

**ಒಳಾಂಗಣ ಹಾಗು ಹೊರಾಂಗಣ, ಮುಕ್ತ ಹಾಗು ಮಾರ್ಗದರ್ಶಿತ ಆಟಗಳಿಗೆ ಒಂದು ಗಂಟೆಯಷ್ಟು ಕಾಲ ಅವಕಾಶ ಕಲ್ಪಿಸಿಕೊಡಿ**

- ಸ್ಥೂಲ ಚಲನಾತ್ಮಕ ಕೌಶಲಗಳ (Gross motor skills) ಹಾಗು ದೈಹಿಕ ಸಮತೋಲನದ ವಿಕಾಸಕ್ಕಾಗಿ ಬಲಿಷ್ಠ ಸ್ನಾಯುಗಳನ್ನು ಬಳಸುವಂತಹ ಚಟುವಟಿಕೆಗಳನ್ನು ಮಾಡಿಸಿ
- ಮಕ್ಕಳು ಅನ್ವೇಷಿಸಲು, ಪ್ರಯೋಗಿಸಲು ಮತ್ತು ಆಯ್ಕೆಗಳನ್ನು ಮಾಡಲು ಅವಕಾಶ ನೀಡುವ ವಾತಾವರಣವನ್ನು ಕಲ್ಪಿಸಿಕೊಡಿ
- ಸಣ್ಣ ಗಾತ್ರದ ಸ್ನಾಯುಗಳ ಬಳಕೆಯನ್ನು ಬೇಡುವ ಹಾಗು ಸೂಕ್ಷ್ಮ ಚಲನಾತ್ಮಕ ಕೌಶಲಗಳನ್ನು (Fine motor skills) ಮತ್ತು ಸಮನ್ವಯವನ್ನು ಬೆಳೆಸುವ ಚಟುವಟಿಕೆಗಳನ್ನು ಮಾಡಿಸಿ
- ಮಕ್ಕಳು ಆಡಲು, ಜೊತೆಗೆ ಒಡನಾಡಲು, ಹಂಚಿಕೊಳ್ಳಲು ಮತ್ತು ಇತರ ಮಕ್ಕಳೊಂದಿಗೆ ವ್ಯವಹರಿಸುವಂತಹ ಅವಕಾಶಗಳನ್ನು ಕಲ್ಪಿಸಿಕೊಡಿ
- ನಾಟಕ, ಪಾತ್ರಾಭಿನಯ ಮತ್ತು ನಾಟಕೀಯ ರೂಪಾಂತರ ಮೊದಲಾದವುಗಳ ಮೂಲಕ ಕಲ್ಪನೆಗೆ, ಅನುಕರಣೆಗೆ ಹಾಗು ಸೃಜನಶೀಲ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಡಿ

ಸಂಗಾರೆಡ್ಡಿ ವಿಭಾಗದಲ್ಲಿ ನಾವು ಅಂಗನವಾಡಿ ಶಿಕ್ಷಕರ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮದಲ್ಲಿ ಗಮನಹರಿಸುವ ಆರು ಬೋಧನಾ ಪದ್ಧತಿಗಳಲ್ಲಿ ಆಟವೂ ಒಂದಾಗಿದೆ. ಈ ಬೋಧನಾ ಪದ್ಧತಿಯು ಶಿಕ್ಷಕರು ದಿನವೂ, ಕಡಿಮೆ ಎಂದರೆ ಒಂದು ಗಂಟೆಯಷ್ಟು ಒಳಾಂಗಣ ಹಾಗು ಹೊರಾಂಗಣ, ಮುಕ್ತ ಮತ್ತು ಮಾರ್ಗದರ್ಶಿತ ಆಟಗಳಿಗೆ ಅವಕಾಶ ಕಲ್ಪಿಸಿಕೊಡಬೇಕು ಎಂಬ ವಿಚಾರಕ್ಕೆ ಒತ್ತು ನೀಡುತ್ತದೆ.

**ಆಟವಾಡುವುದು ಸಮಯವನ್ನು ಪೋಲು ಮಾಡಿದಂತೆಯೇ?**

ಅಧೆಮ್ಮ ಹೈದರಾಬಾದ್‌ನಿಂದ 120 ಕಿ.ಮೀ. ದೂರದಲ್ಲಿರುವ ಅಂಗನವಾಡಿ ಕೇಂದ್ರವೊಂದರ ಶಿಕ್ಷಕಿ. ಅವರ ಪಾಲನೆಯಲ್ಲಿರುವ ಮಗು ಶೈಲಜಾಳ ಅಮ್ಮ ಒಂದು ಸಂಜೆ ಅಧೆಮ್ಮ ಅವರನ್ನು ಕಾಣಲು ಬರುತ್ತಾರೆ. ಮಗಳು ಶೈಲಜಾ ಅಂಗನವಾಡಿಯಲ್ಲಿ ಬಹುಪಾಲು ಸಮಯ ಆಟವಾಡುತ್ತಿರುವುದನ್ನೇ ತಾನು ನೋಡುತ್ತಿರುವುದಾಗಿಯೂ, ಶೈಲಜಾ ಹೆಚ್ಚಾಗಿ ಏನನ್ನೂ ಕಲಿಯುತ್ತಿಲ್ಲವೆಂದೂ, ಇದರಿಂದ ಅವಳು ಒಂದನೇ ತರಗತಿಗೆ ಸೇರುವಾಗ ಅವಳಿಗೆ ಅನನುಕೂಲವಾದೀತು ಎಂಬ ಆತಂಕವನ್ನು ತೋಡಿಕೊಳ್ಳಲು ಆಕೆ ಬಂದಿದ್ದರು. ಅವರಿಗೆ ಅಂಗನವಾಡಿ ಕೇಂದ್ರಕ್ಕೆ ಮರುದಿನ ಬೆಳಗ್ಗೆ 10:30ಕ್ಕೆ ಬರುವಂತೆ ಶಿಕ್ಷಕಿ ಅಧೆಮ್ಮ ಹೇಳಿಕಳುಹಿಸುತ್ತಾರೆ.

ಕೇಂದ್ರದಲ್ಲಿ ಪ್ರತಿದಿನ ನೀಡಲಾಗುವ ಮೊಟ್ಟೆಗಳನ್ನು ಮಕ್ಕಳು ಸೇವಿಸುವ ವೇಳೆಗೆ ಶೈಲಜಾಳ ತಾಯಿ ಅಲ್ಲಿಗೆ ಬರುತ್ತಾರೆ. ಬೆಳಗ್ಗೆ 9 ಗಂಟೆಗೆ ಮಕ್ಕಳನ್ನು ಶುಭಾಶಯ ಕೋರಿ ಸ್ವಾಗತಿಸುವುದರೊಂದಿಗೆ ತಾನು ದಿನವನ್ನು ಆರಂಭಿಸಿದುದಾಗಿ ಅಧೆಮ್ಮ ಶೈಲಜಾಳ ತಾಯಿಗೆ ತಿಳಿಸುತ್ತಾರೆ. ಬಳಿಕ ಮಕ್ಕಳು ವೃತ್ತಾಕಾರವಾಗಿ ಕುಳಿತು ಸಂಭಾಷಿಸುತ್ತಾರೆ, ನಟನೆಯೊಂದಿಗೆ ಶಿಶುಗೀತೆಗಳನ್ನು ಹಾಡುತ್ತಾರೆ, ಕಥೆ ಕೇಳುತ್ತಾರೆ. ಈ ಪ್ರತಿ ಚಟುವಟಿಕೆಯೂ ಸುಮಾರು ಇಪ್ಪತ್ತು ನಿಮಿಷಗಳ ಕಾಲ ನಡೆಯುತ್ತದೆ. ಆ ಬಳಿಕ ಇದೀಗ ಮಕ್ಕಳಿಗೆ ತಿನ್ನಲು ಮೊಟ್ಟೆಗಳನ್ನು ಕೊಟ್ಟಿರುವುದಾಗಿ ತಿಳಿಸುತ್ತಾರೆ. ಮಕ್ಕಳು ಮೊಟ್ಟೆ ತಿಂದು ಕೈತೊಳೆದುಕೊಂಡು ಬರುತ್ತಾರೆ. ಆಗ ಶಿಕ್ಷಕರು ಮಕ್ಕಳಿಗೆ ಹೊರ ಹೋಗಿ ಆಡಬಹುದು ಎಂದು ತಿಳಿಸುತ್ತಾರೆ.



ಪ್ರತಿ ಮಗುವೂ ತನ್ನ ಆಯ್ಕೆಯ ಒಂದೋ ಎರಡೋ ಆಟಿಕೆಗಳನ್ನು ಶಿಕ್ಷಕರ ಮೇಜಿನ ಪಕ್ಕದಲ್ಲಿರಿಸಿದ್ದ ಹೊರಾಂಗಣ ಆಟದ ಡಬ್ಬದಿಂದ ಎತ್ತಿಕೊಂಡು ಹೊರಗೆ ಓಡುತ್ತದೆ. ಶಿಕ್ಷಕರು ಶೈಲಜಾಳ ತಾಯಿಗೆ ಆ ಮಕ್ಕಳನ್ನು ತೋರಿಸುತ್ತಾ, "ಮಕ್ಕಳು ಹೊರಗೆ ಆಡಲು ಹೋಗುವಾಗ ಅದೆಷ್ಟು ಸಂತೋಷದಿಂದ ಇರುತ್ತವೆ ನೋಡಿ; ಖುಷಿಯಿಂದಿರುವ ಮಕ್ಕಳು ದುಃಖದಲ್ಲಿರುವ ಮಕ್ಕಳಿಗಿಂತ ಹೆಚ್ಚು ಮತ್ತು ಚೆನ್ನಾಗಿ ಕಲಿಯುತ್ತಾರೆ" ಎಂದರು. ಬಳಿಕ ಶಿಕ್ಷಕರೂ ಹೊರಗೆ ಬಂದು ಮಕ್ಕಳು ಆಟವಾಡುವುದು ಕಾಣಿಸುವಂತೆ ಮುಂದಿನ ಮೊಗಸಾಲೆಗೆ ಹೋಗಿ ಕುಳಿತರು. ಶಿಕ್ಷಕರು, "ಮಕ್ಕಳು ಆಡುವ ಹೊರಾಂಗಣ ಆಟಗಳಲ್ಲಿ ಎರಡು ವಿಧಗಳಿವೆ. ಮಕ್ಕಳು ಯಾವುದೇ ನಿಯಮಗಳಿಲ್ಲದೆ ತಮ್ಮಷ್ಟಕ್ಕೆ ತಾವೇ ಆಡಿಕೊಳ್ಳುವುದು ಮುಕ್ತ ಆಟ. ಕ್ರಿಯಾತ್ಮಕ ರೂಪದ ಈ ರೀತಿಯ ಆಟದಲ್ಲಿ ಮಕ್ಕಳು ಕೆಲವೊಮ್ಮೆ ಯಾವುದೇ ವಸ್ತುಗಳಿಲ್ಲದೆ ಓಡುವುದು, ಜಿಗಿಯುವುದು, ಜಾರುವುದು, ಇತ್ಯಾದಿ ದೈಹಿಕ ಚಲನೆಗಳನ್ನು ಬಳಸುತ್ತಿರುತ್ತಾರೆ. ಕೆಲವೊಮ್ಮೆ ಅವರು ಚೆಂಡು, ಬ್ಯಾಟು ಅಥವಾ ಹೂಲಾ ಪಟ್ಟಿಯಂತಹ (hula hoop) ವಸ್ತುಗಳೊಂದಿಗೆ ದೈಹಿಕ ಚಲನೆಗಳನ್ನು ಮಾಡುತ್ತಾರೆ. ಈ ಎಲ್ಲವೂ ಅವರ ದೇಹದ ಸ್ನಾಯುಗಳು ಬೆಳೆದು ಗಟ್ಟಿಮುಟ್ಟಾಗಲು ಸಹಾಯಕವಾಗಿವೆ" ಎಂದರು.



ಇಪ್ಪತ್ತು ನಿಮಿಷಗಳ ಬಳಿಕ ಶಿಕ್ಷಕರು ಶೈಲಜಾಳ ತಾಯಿಗೆ, "ಈಗ ನಿರ್ದೇಶಿತ ಆಟದ ಸಮಯ. ನಿರ್ದೇಶಿತ ಹೊರಾಂಗಣ ಆಟದಲ್ಲಿ ಮಕ್ಕಳು ನಾನು ನೀಡುವ ಸೂಚನೆಗಳನ್ನು ಗಮನಿಸಿ, ಆಟದ ನಿಯಮಗಳನ್ನು ಅನುಸರಿಸಿ ಆಡುತ್ತಾರೆ." ಎಂದು ತಿಳಿಸಿದರು. ಅವರು ಮಕ್ಕಳನ್ನು ಬಳಿಗೆ ಕರೆದು ಅವರನ್ನು ಎರಡು ತಂಡಗಳನ್ನಾಗಿ ವಿಂಗಡಿಸಿದರು. ನೆಲದ ಮೇಲೆ ದೊಡ್ಡದೊಂದು ವೃತ್ತವನ್ನು ಬರೆದು ಒಂದು ತಂಡವನ್ನು ಅದರೊಳಗೆ ನಿಲ್ಲುವಂತೆ ಸೂಚಿಸಿದರು. ಈ ಮಕ್ಕಳು ಈಗ ಕೋತಿಗಳಾಗಲಿದ್ದಾರೆ ಎಂದು ಎಲ್ಲರಿಗೂ ಅವರು ತಿಳಿಸಿದರು. ಎರಡನೇ ತಂಡವನ್ನು ವೃತ್ತದ ಹೊರಗೆ ಚದುರಿ ನಿಲ್ಲುವಂತೆ ತಿಳಿಸಿ, ಚೆಂಡೊಂದನ್ನು ಅವರ ಕೈಯಲ್ಲಿತ್ತರು. ಆ ಚೆಂಡನ್ನು ಅವರು ವೃತ್ತದ ಒಳಗಿದ್ದ ಕೋತಿಗಳು ಹಿಡಿಯಲಾಗದಂತೆ (ವೃತ್ತದಿಂದ ಹೊರಗಿರುವ) ತಮ್ಮ ತಂಡದವರಿಗೆ ಮಾತ್ರ ಸಿಗುವಂತೆ ಹೇಗೆ ಎಸೆಯಬೇಕೆಂದು ತೋರಿಸಿಕೊಟ್ಟರು. ಪ್ರತಿ ಸಲ ಕೋತಿಗಳು ಚೆಂಡನ್ನು ಹಿಡಿದಾಗಲೂ ಆಕೆ ಕೋತಿಗಳ ತಂಡಕ್ಕೆ ಒಂದು ಅಂಕ ಕೊಡುತ್ತಿದ್ದರು. ಹತ್ತು ನಿಮಿಷಗಳ ಬಳಿಕ ಅವರು ತಂಡಗಳ ಸದಸ್ಯರನ್ನು ಪರಸ್ಪರ ಬದಲಾಯಿಸಿದರು. ಕೊನೆಗೆ ಚಪ್ಪಾಳೆ ಹೊಡೆದು ಪರಸ್ಪರ ಮೆಚ್ಚುಗೆ ಸೂಚಿಸುವಂತೆ ತಂಡದ ಪ್ರತಿಯೊಬ್ಬರಿಗೂ ತಿಳಿಸಿದರು.



ಬಳಿಕ ಮಕ್ಕಳಿಗೆ ಕೈತೊಳೆದು ಒಳಗೆ ಹೋಗುವಂತೆ ಶಿಕ್ಷಕಿ ಹೇಳಿದರು. ಮಕ್ಕಳ ಪೈಕಿ ಒಂದು ಮಗು ಕೈತೊಳೆಯಲು ನೀರು ಬಿಡುವ ಕೆಲಸ ವಹಿಸಿಕೊಂಡಿತು. ಉಳಿದ ಮಕ್ಕಳು ಸರದಿಯಲ್ಲಿ ಸಾಬೂನು ಬಳಸಿ ಚೆನ್ನಾಗಿ ಕೈ ತೊಳೆದು ಒಳನಡೆದರು. ಶಿಕ್ಷಕರೂ ಕೈ ತೊಳೆದುಕೊಂಡು ಬಂದು, ಶೈಲಜಾಳ ತಾಯಿಗೆ ಚೆಂಡನ್ನು ಎಸೆಯುವುದು ಮತ್ತು ಹಿಡಿಯುವುದರಿಂದ ಹೇಗೆ ಮಕ್ಕಳ ಕಣ್ಣು-ಕೈಗಳ ಹೊಂದಾಣಿಕೆಯುನ್ನು ಸುಧಾರಿಸುತ್ತದೆ ಎಂದು ತಿಳಿಸಿಕೊಟ್ಟರು. ಮುಂದಿನ ವರ್ಷ ಅವರು ಅಕ್ಷರಗಳನ್ನು, ಸಂಖ್ಯೆಗಳನ್ನು ಬರೆಯಲು ತೊಡಗುವಾಗ ಈ ಕೌಶಲವೇ ಅವರ ಸಹಾಯಕ್ಕೆ ಬರುವುದರಿಂದ ಇವು ಮಕ್ಕಳು ಕಲಿಯಬೇಕಿರುವ ಅತಿಮುಖ್ಯ ಕೌಶಲವಾಗಿದೆ ಎಂದೂ ತಾಯಿಗೆ ವಿವರಿಸಿದರು. ಕೇಂದ್ರದ ಒಳಗೆ ಶಿಕ್ಷಕರು ಪ್ರತಿ ಮಗುವಿಗೂ ಒಂದು ಖಾಲಿ ಹಾಳೆ ಮತ್ತು ಎರಡು ಬಣ್ಣದ ಪೆನ್ಸಿಲ್ಲುಗಳನ್ನು ನೀಡಿ, ಹಿಂದಿನ ದಿನ ತಾವು ಪ್ರಕೃತಿ ಸಂಚಾರಕ್ಕೆ ಹೋದಾಗ ನೋಡಿದ ಗಿಡಗಳ ಚಿತ್ರ ಬಿಡಿಸುವಂತೆ ಹೇಳಿದರು. ಸ್ವಲ್ಪ ಹೊತ್ತಿಗೆ ಮಧ್ಯಾಹ್ನದ ಬಿಸಿಯೂಟದ ಸಮಯವಾಯಿತು. ಊಟ ಮಾಡಿದ ಮಕ್ಕಳು ಕಿರುನಿದ್ದೆಗೆ ಜಾರಿದರು.



ಮಧ್ಯಾಹ್ನ 2 ಗಂಟೆಯ ಹೊತ್ತಿಗೆ ಶಿಕ್ಷಕರು ಮಕ್ಕಳನ್ನು ಎಬ್ಬಿಸಿ, ಅವರಿಗೆ "ಕಲಿಕೆ ಮೂಲೆ"ಗಳಲ್ಲಿ (learning corners) ಆಟವಾಡುವಂತೆ ಹೇಳಿದರು. ಕೆಲವು ಮಕ್ಕಳು ಬಿಲ್ಡಿಂಗ್ ಬ್ಲಾಕ್‌ಗಳನ್ನು ತೆಗೆದುಕೊಂಡು ರೈಲು, ಬಸ್ಸು, ಕಟ್ಟಡಗಳನ್ನು ಕಟ್ಟುವ ಆಟವಾಡತೊಡಗಿದರು. ಶಿಕ್ಷಕರು ಅವರೆಡೆಗೆ ಬೊಟ್ಟುಮಾಡುತ್ತ ಶೈಲಜಾಳ ತಾಯಿಗೆ, "ಮಕ್ಕಳು ಬಿಲ್ಡಿಂಗ್ ಬ್ಲಾಕ್‌ಗಳ ಜೊತೆ ಆಡುವಾಗ ಅವರ ಕೈ ಬೆರಳುಗಳು ಗಟ್ಟಿಮುಟ್ಟಾಗುತ್ತವೆ. ಅವರು ತಮ್ಮಲ್ಲಿರುವ ಸೃಜನಾತ್ಮಕ ಕೌಶಲಗಳನ್ನು ಬೇರೆ-ಬೇರೆ ವಸ್ತುಗಳನ್ನು ಕಟ್ಟಲು ಬಳಸುತ್ತಾರಲ್ಲದೆ, ತಪ್ಪನ್ನು ಸರಿಪಡಿಸಿಕೊಳ್ಳುವ ಮೂಲಕ ಕಲಿಯುತ್ತಾರೆ. ಇದು ಅವರ ತಾಳ್ಮೆ ಮತ್ತು ಏಕಾಗ್ರತೆಗಳನ್ನು ಕೂಡ ಹೆಚ್ಚಿಸುತ್ತದೆ." ಎಂದರು.

ಶಿಕ್ಷಕರು ಬಳಿಕ, "ಪುಸ್ತಕದ ಮೂಲೆ"ಯಲ್ಲಿ (book corner) ಕುಳಿತು ಪುಸ್ತಕಗಳನ್ನು ತಿರುವಿಹಾಕುತ್ತಾ, ಅವುಗಳನ್ನು ಓದುತ್ತಿರುವಂತೆ ನಟಿಸುತ್ತಿದ್ದ ಕೆಲವು ಮಕ್ಕಳತ್ತ ಬೊಟ್ಟುಮಾಡಿ ತೋರಿಸಿದರು. ಇನ್ನು ಕೆಲವು ಮಕ್ಕಳು "ಬೊಂಬೆ ಮೂಲೆ"ಯಲ್ಲಿ (doll corner) ಕುಳಿತಿರುವುದನ್ನು ತೋರಿಸಿದರು. ಅವರಲ್ಲಿ ಒಂದು ಮಗು ಅಡುಗೆ ಮನೆ ಆಟಿಕೆಗಳಿಂದ ಅಮ್ಮನಂತೆ ಅಡುಗೆ ಮಾಡುವುದರಲ್ಲಿ ತೊಡಗಿತ್ತು. ಇನ್ನೆರಡು ಮಕ್ಕಳು ವೈದ್ಯರ ಆಟಿಕೆ ವಸ್ತುಗಳನ್ನು ಹಿಡಿದು ಆಡುತ್ತಿದ್ದವು. ಒಂದು ಮಗು ವೈದ್ಯರಂತೆಯೂ ಮತ್ತೊಂದು ರೋಗಿಯಂತೆಯೂ ನಟಿಸುತ್ತಿದ್ದವು. "ಮುಕ್ತ ಆಟದ ಸಮಯದಲ್ಲಿ ವಯಸ್ಕರ ಜಗತ್ತಿನಲ್ಲಿ ನೋಡುವುದನ್ನು ಮಕ್ಕಳು ಅನುಕರಿಸುತ್ತಾರೆ, ಹೊಸ ವಾಸ್ತವಗಳನ್ನು ಕಲ್ಪಿಸಿಕೊಳ್ಳುತ್ತಾರೆ ಮತ್ತು ಅದನ್ನು ಮರುನಿರ್ಮಿಸುತ್ತಾರೆ; ಹಾಗು ಉಳಿದ ಮಕ್ಕಳೊಡನೆ ಸೇರಿ ಅವುಗಳನ್ನು ಪರೀಕ್ಷಿಸಿ ನೋಡುತ್ತಾರೆ. ಸಹಪಾಠಿಗಳೊಂದಿಗಿನ ಈ ಒಡನಾಟವು ಅವರ ಸಾಮಾಜಿಕ ಕೌಶಲಗಳನ್ನು ವಿಕಾಸಗೊಳಿಸುತ್ತದೆ" ಎಂದು ಶಿಕ್ಷಕರು ಹೇಳಿದರು. ತನ್ನ ಮಗು ಸರಳ ಆಟಗಳ ಮೂಲಕ ಎಷ್ಟೊಂದು ಸಂಗತಿಗಳನ್ನು ಕಲಿಯುತ್ತಿದೆ ಎಂದು ತಿಳಿದು ಶೈಲಜಾಳ ತಾಯಿ ಅಶ್ಚರ್ಯ-ಚಕಿತರಾದರು. ಆಟದಿಂದ ಸಮಯ ಹಾಳು ಎಂಬ ನಂಬುಗೆಗೆ ಆಕೆ ಅಂದೇ ಇತಿಶ್ರೀ ಹಾಡಿದರು. ಅಂಗನವಾಡಿ ಕೇಂದ್ರದ ಪ್ರಕ್ರಿಯೆಗಳನ್ನು ತಾಳ್ಮೆಯಿಂದ ವಿವರಿಸಿದ್ದಕ್ಕಾಗಿ ಶಿಕ್ಷಕರನ್ನು ಅಭಿನಂದಿಸಿ, ಸಾಧ್ಯವಾಗುವ ಎಲ್ಲ ವಿಧದಲ್ಲೂ ಶಿಕ್ಷಕರಿಗೆ ಬೆನ್ನೆಲುಬಾಗಿ ನಿಲ್ಲುವ ಮಾತುಕೊಟ್ಟರು. ಶಿಕ್ಷಕರು, "ಈ ಶನಿವಾರ ತಿಂಗಳ ಪೋಷಕರು-ಶಿಕ್ಷಕರ ಸಂವಾದದ ದಿನದಂದು (ECCE Day) ನೀವಿಂದು ನಿಮ್ಮ ಅನುಭವದ ಮೂಲಕ ಕಂಡುಕೊಂಡಿದ್ದನ್ನು ಉಳಿದ ಪೋಷಕರಿಗೂ ವಿವರಿಸಿದರೆ ಅವರೂ ಇದನ್ನು ಅರ್ಥಮಾಡಿಕೊಂಡು ತಮ್ಮ ಮಕ್ಕಳನ್ನು ಇನ್ನೂ ಉತ್ತಮವಾಗಿ ಬೆಂಬಲಿಸಬಹುದು" ಎಂದು ತಿಳಿಸಿದರು.

**ಸಮರ್ಥರನ್ನಾಗಿಸುವ ಪರಿಸರದ ಸೃಷ್ಟಿ**

**ಭೌತಿಕ ಪರಿಸರ**

ಅಂಗನವಾಡಿ ಕೇಂದ್ರವು ಮಕ್ಕಳು ಆಟವಾಡಲು ಸಾಧ್ಯವಾಗುವಂತೆ ಶುಚಿಯಾಗಿ, ಆರೋಗ್ಯಪೂರ್ಣವಾಗಿ, ಸುರಕ್ಷಿತವಾಗಿ ಇರಬೇಕು. ಕೇಂದ್ರದ ಬಳಕೆಗಾಗಿ ಒಂದೇ ಒಂದು ಕೊಠಡಿಯಿರುವ ಕಡೆ, (ಮಧ್ಯಾಹ್ನದ ಬಿಸಿಯೂಟದ) ಅಡುಗೆ ಕೆಲಸಕ್ಕಾಗಿ ಬೇಕಾಗುವ ಜಾಗವನ್ನು ಉಳಿದ ಜಾಗದಿಂದ ಸ್ಪಷ್ಟವಾಗಿ ಬೇರ್ಪಡಿಸಿರಬೇಕು. ಮಕ್ಕಳು ಆಡಲು ಸಾಕಷ್ಟು ಸಾಮಗ್ರಿಗಳು ಇರುವಂತೆ ಕಲಿಕಾ ಮೂಲೆಗಳನ್ನು ಶಿಕ್ಷಕರು ಅಣಿಗೊಳಿಸಿರಬೇಕು. ಆಟ ಹಾಗು ಮುದ್ರಿತ ಸಾಮಗ್ರಿಗಳು ಪ್ರಚೋದಕವಾಗಿದ್ದು, ನಿಗದಿತ ದಿನದಂದು ಮಕ್ಕಳನ್ನು ಯಾವ ರೀತಿ ತೊಡಗಿಸಬೇಕೆಂಬ ಶಿಕ್ಷಕರ ಎಣಿಕೆಯ ಆಧಾರದ ಮೇಲೆ ಆ ಸಾಮಗ್ರಿಗಳನ್ನು ಅಣಿಗೊಳಿಸಬೇಕು.

**ಮಾನಸಿಕ ವಾತಾವರಣ**

ಶಿಕ್ಷಕರು ಕಾಳಜಿ ತೋರುತ್ತಾ, ಗೌರವಪೂರ್ವಕವಾಗಿ ವ್ಯವಹರಿಸುವ ಮೂಲಕ ಮಕ್ಕಳಿಗೆ ಭಯರಹಿತವಾದ ವಾತಾವರಣವನ್ನು ಕಲ್ಪಿಸಿಕೊಡಬೇಕು. ಮಕ್ಕಳು ಯಾವುದೇ ಹಿಂಜರಿಕೆಯಿಲ್ಲದೆ ತಮ್ಮನ್ನು ಸಂಪೂರ್ಣವಾಗಿ ಅಭಿವ್ಯಕ್ತಿಸಿಕೊಳ್ಳಲು ಸಾಕಷ್ಟು ಆರಾಮದಾಯಕವಾದ ವಾತಾವರಣ ಇರಬೇಕು. ಎಲ್ಲಾ ಮಕ್ಕಳಿಗೂ ಅವರವರ ವಿಕಾಸದ ಹಂತಕ್ಕೆ ಅನುಗುಣವಾಗಿ ಅವಕಾಶಗಳು ದೊರೆಯಬೇಕು. ಆಟದ ಸಮಯದಲ್ಲಿ ಅವರ ನಿರ್ವಹಣೆಗಿಂತಲೂ ಆಟದಲ್ಲಿ ಭಾಗವಹಿಸಿದ್ದಕ್ಕಾಗಿ ಅವರನ್ನು ಅಭಿನಂದಿಸಬೇಕು.

**ಮೌಲ್ಯಮಾಪನ ಮತ್ತು ಮಧ್ಯಸ್ಥಿಕೆಗಳಲ್ಲಿ ಆಟದ ಪಾತ್ರ**

ಕಾಗದ ಮತ್ತು ಪೆನ್ಸಿಲಿನ ಪರೀಕ್ಷೆಗಳು ಪ್ರಾಥಮಿಕ ತರಗತಿಯ ಹಂತಗಳಲ್ಲಿ ಮಕ್ಕಳ ಮೌಲ್ಯಮಾಪನಕ್ಕೆ ಒದಗಿಬರಬಹುದು; ಆದರೆ, ಅಂಗನವಾಡಿ ಕೇಂದ್ರಕ್ಕೆ ಈ ವಿಧಾನಗಳು ನಿರರ್ಥಕವೆನಿಸುತ್ತವೆ. ಅಂಗನವಾಡಿ ಕೇಂದ್ರದ ಮಕ್ಕಳ ವಿಕಾಸದ ಹಂತಗಳನ್ನು ಅರಿಯಲು ಆಟವೂ ಒಂದು ವಿಧಾನವಾಗುತ್ತದೆ. ಇಲ್ಲಿ ವೈಯಕ್ತಿಕ ಹಾಗು ತಂಡದ ಆಟಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಶಿಕ್ಷಕರು ಸುಗಮಗೊಳಿಸುತ್ತಾರೆ, ಮಕ್ಕಳನ್ನು ಗಮನಿಸುತ್ತಾರೆ ಹಾಗು ತಾವು ಗಮನಿಸಿದ್ದನ್ನು ಕಥೆಯ ರೂಪದಲ್ಲಿ, ಅವಲೋಕನ ವರದಿ, ನಿರಂತರ ಟಿಪ್ಪಣಿಗಳ ರೂಪದಲ್ಲಿ ದಾಖಲಿಸುತ್ತಾರೆ. ಒಂದು ನಿರ್ದಿಷ್ಟ

ಸಮಯದವರೆಗೆ ದಾಖಲಿಸಲಾದ ಈ ಟಿಪ್ಪಣಿಗಳನ್ನು ಬಳಸಿ ವಿವಿಧ ಕ್ಷೇತ್ರಗಳಲ್ಲಿ ಮಕ್ಕಳ ವಿಕಾಸದ ಹಂತವನ್ನು ಗುರುತಿಸಬಹುದಾಗಿದೆ. ಇವನ್ನು ಬಳಸಿಕೊಂಡು ಪ್ರತಿ ಮಗುವಿಗೂ ಅಗತ್ಯ ಅವಕಾಶಗಳನ್ನು ಕಲ್ಪಿಸಿಕೊಡಲು ಹೆಚ್ಚಿನ ಮಧ್ಯಸ್ಥಿಕೆಗಳನ್ನು ಆಯೋಜಿಸ-ಬಹುದಾಗಿದೆ. ಶಿಕ್ಷಕರು ಶೈಕ್ಷಣಿಕ ವರ್ಷದ ಉದ್ದಕ್ಕೂ ಅನುಸರಿಸ-ಬೇಕಿರುವ ಒಂದು ನಿರಂತರ ಪ್ರಕ್ರಿಯೆ ಇದಾಗಿದೆ.

**ಆಟದಿಂದ ದೊರೆಯುವ ಲಾಭಗಳು**

ಆಟವೆಂಬುದು ಕೇವಲ ಭೌತಿಕ ವಿಕಾಸಕ್ಕಷ್ಟೇ ಅಲ್ಲದೆ, ಮಕ್ಕಳ ಭಾಷಿಕ, ಸಾಮಾಜಿಕ, ಸಂವೇದನಾತ್ಮಕ, ಭಾವನಾತ್ಮಕ ಮತ್ತು ಸೃಜನಾತ್ಮಕ ವಿಕಾಸಕ್ಕೆ ಒತ್ತಾಸೆಯಾಗಿ ಇರುತ್ತದೆ. ಮೆದುಳಿನ ಆರೋಗ್ಯಕರ ಬೆಳವಣಿಗೆಯಲ್ಲಿ ಆಟ ನಿರ್ಣಾಯಕ ಪಾತ್ರ ವಹಿಸುತ್ತದೆ; ಏಕೆಂದರೆ, ಕೌಶಲ್ಯಗಳ ಪುನರಾವರ್ತಿತ ಬಳಕೆಯಿಂದ ನರಕೋಶಗಳ ಸಂಧಿಸ್ಥಾನದ (synaptic connections) ಸಂಬಂಧಗಳನ್ನು ಬಲಪಡಿಸುತ್ತದೆ. ಮಕ್ಕಳು ಕಲೆತು ಆಡುವಾಗ ಅವರ ನಡುವೆ ಪರಸ್ಪರ ಸಂವಹನವು ನಡೆಯುತ್ತಿರುತ್ತದೆ. ಮಕ್ಕಳು ಪಾತ್ರಾಭಿನಯ ಹಾಗು ನಾಟಕರೂಪದ ಆಟದಲ್ಲಿ ಮಾತನಾಡುತ್ತಾ, ಆಲಿಸುತ್ತಾ, ಉಳಿದ ಮಕ್ಕಳು ಪರಸ್ಪರ ಪ್ರತಿಕ್ರಿಯಿಸುವುದನ್ನು ಗಮನಿಸುತ್ತಾ ಇರುತ್ತಾರೆ. ಅವರು ಶಿಕ್ಷಕರ ಸೂಚನೆಗಳನ್ನು ಆಲಿಸುತ್ತಾರೆ. ಇವೆಲ್ಲವೂ ಅವರಿಗೆ ಮೌಖಿಕಭಾಷಾ ಸಾಮರ್ಥ್ಯಗಳನ್ನು (verbal-linguistic abilities) ಕಲಿಯುವ, ಬೆಳೆಸಿಕೊಳ್ಳುವ ಅವಕಾಶಗಳಾಗಿರುತ್ತವೆ.

ಆಟವು ಭೌತಿಕ ಚಲನೆಯನ್ನು ಒಳಗೊಂಡಿರುವುದರಿಂದ, ಮಕ್ಕಳು ಶಕ್ತಿ, ನಮ್ಯತೆ, ನೈಪುಣ್ಯತೆ, ಸಮನ್ವಯ ಮತ್ತು ಅವರ ಸ್ನಾಯುಗಳ ಹೆಚ್ಚಿನ ನಿಯಂತ್ರಣಗಳನ್ನು ಅಭಿವೃದ್ಧಿಗೊಳಿಸಿಕೊಳ್ಳಲು ನೆರವಾಗುತ್ತದೆ. ಆಟದ ಮೂಲಕ ಅವರು ತಮ್ಮ ದೇಹದ ಸಾಮರ್ಥ್ಯ ಹಾಗು ಮಿತಿಗಳನ್ನು ಅನ್ವೇಷಿಸಿ ಅರಿಯುತ್ತಾರೆ. ನಿಗದಿತ ಗುರಿಗಳನ್ನು ಸಾಧಿಸಲು ಬೇಕಾದ ಯೋಚನೆ, ವಿಶ್ಲೇಷಣೆ, ತರ್ಕ, ಊಹೆ ಹಾಗು ಸಮಸ್ಯಾ-ಪರಿಹಾರದ ಗುಣಗಳು ಕ್ರೀಡೆಗೆ ಬೇಕಾಗುತ್ತದೆ. ಅಲ್ಲದೆ ಮಕ್ಕಳು ಇತರ ಮಕ್ಕಳ ಜೊತೆಗೆ ಆಡುವಾಗ ತಮ್ಮ ಭಾವನೆಗಳನ್ನು, ಸಾಮಾಜಿಕ ಸಂಬಂಧಗಳನ್ನು, ಹಂಚಿ-ಕೊಳ್ಳುವ ಅಭ್ಯಾಸಗಳನ್ನು, ಹೊಂದಾಣಿಕೆಯನ್ನು, ಸಹಕರಿಸುವುದನ್ನು ಹಾಗು ಕಾಳಜಿ ತೋರಿಸುವುದನ್ನು ಕಂಡುಕೊಳ್ಳುತ್ತಾರೆ. ಮಕ್ಕಳು ಸುತ್ತಮುತ್ತಲಿನ ಜಗತ್ತಿನ ತಮ್ಮ ಪ್ರಸಕ್ತ ತಿಳುವಳಿಕೆಯನ್ನು ಹಾಗು ಸುತ್ತಮುತ್ತಲಿನ ವಸ್ತುಗಳನ್ನು ಬಳಸಿ ಹೊಸ ವಸ್ತುಗಳನ್ನು ಸೃಷ್ಟಿಸುವ ತಮ್ಮ ಸೃಜನಶೀಲತೆಯನ್ನು ಪ್ರಯೋಗಿಸಲು ಹಾಗು ವಿಸ್ತರಿಸಿಕೊಳ್ಳಲು ತಮ್ಮ ಕಲ್ಪನಾಶಕ್ತಿಯನ್ನು ಬಳಸುತ್ತಾರೆ.



ಏಕಾಂಗಿಯಾಗಿ ಆಡುವ ಆಟವು ಮಗುವಿಗೆ ತನ್ನ ಪರಿಸರವನ್ನು ಅನ್ವೇಷಿಸಲು ಸಹಾಯಮಾಡುತ್ತದೆ. ಮಕ್ಕಳು ಆಟಿಕೆಗಳೊಂದಿಗೆ ಆಡುತ್ತಾ, ಹಾಗೆ ಆಡುವ ಅನೇಕಾನೇಕ ವಿಧಾನಗಳನ್ನು ಕಂಡುಕೊಳ್ಳುತ್ತಾರೆ. ಅವರು ತಮ್ಮ ಕಲ್ಪನಾಶಕ್ತಿಯ ಮೂಲಕ ತಮ್ಮ ಜಗತ್ತನ್ನು ಸೃಷ್ಟಿಸಿಕೊಳ್ಳುತ್ತಾರೆ. ನಾಟಕೀಯ ಆಟವು ಮಕ್ಕಳು ಹಣದಂತಹ ಅಮೂರ್ತ ಪರಿಕಲ್ಪನೆಗಳನ್ನು ಪರೀಕ್ಷಿಸಿ ನೋಡಲು ನೆರವಾಗುತ್ತದೆ. ಹೊಸ ಕೌಶಲಗಳ ವಿಕಾಸಕ್ಕೆ ಎಡೆಮಾಡುವ ವಯಸ್ಕರ ಪಾತ್ರಗಳನ್ನು ನಿರ್ವಹಿಸುವ ಮೂಲಕ ಅವರಿಗೆ ಭಯವನ್ನು ನೀಗಲು ಸಹಕಾರಿಯಾಗುತ್ತದೆ. ಇವೆಲ್ಲದರಿಂದ ಸಾಮಾಜಿಕ ಸಂದರ್ಭಗಳಲ್ಲಿ ಭಾಗವಹಿಸುವಾಗ ಅವರ ಆತ್ಮವಿಶ್ವಾಸ, ಪುಟಿದೇಳುವ ಗುಣ ಮತ್ತು ಸ್ವಾಭಿಮಾನವು ವೃದ್ಧಿಯಾಗುತ್ತವೆ. ತಂಡದಲ್ಲಿ ಆಡುವುದರಿಂದ ಮಕ್ಕಳಿಗೆ ಸಂವಹನದ, ಹಂಚಿಕೊಳ್ಳುವ, ಸರದಿಗಾಗಿ ಕಾಯುವ, ಸ್ವ-ನಿಯಂತ್ರಣದ, ನಿರ್ಧಾರಗಳನ್ನು ತೆಗೆದುಕೊಳ್ಳುವ ಗುಣಗಳನ್ನು ಮತ್ತು ನಾಯಕತ್ವದ ಕೌಶಲಗಳನ್ನು ಅಭ್ಯಾಸಮಾಡಲು ಸಹಾಯವಾಗುತ್ತದೆ. ಒಂದು ಮಗು ಅಪರಿಚಿತ ಮಕ್ಕಳೊಡನೆ ಕೂಡಿ ಆಡುವುದರಿಂದ ಅದರ ಆತಂಕ, ಭಯ ಕಡಿಮೆಯಾಗುತ್ತದೆ. ಇದು, ಸಮಯ ಕಳೆದಂತೆ, ಮಗುವಿಗೆ ಜೀವನದಲ್ಲಿ ಹೊಸಬರನ್ನು ಎದುರಿಸುವ ಆತ್ಮವಿಶ್ವಾಸವನ್ನು ನೀಡುತ್ತದೆ.

**ಆಟದ ಮೇಲ್ಮುಖ ಸಮನ್ವಯ (Upward integration of play)**

ಪೂರ್ವ ಪ್ರಾಥಮಿಕ ಹಂತದ ತರಗತಿಗಳಲ್ಲಿ ಆಟವನ್ನು ಶೈಕ್ಷಣಿಕ ವಾತಾವರಣದ ಅತ್ಯಗತ್ಯ ಅಂಶವೆಂದೇ ಭಾವಿಸಲಾಗುತ್ತದೆ. ಪೂರ್ವ ಪ್ರಾಥಮಿಕ ಹಂತವನ್ನು ದಾಟಿದ ಮೇಲೆ ಆಟವನ್ನು "ಕ್ರೀಡಾ ಅವಧಿ"ಗೆ ಸೀಮಿತಗೊಳಿಸಿ ಅದನ್ನು ಬೇರೆಯಾಗಿ ನೋಡಲಾಗುತ್ತದೆ. ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ಪ್ರಾಥಮಿಕ ತರಗತಿಗಳಾದ I ಮತ್ತು II ನ್ನು ಪೂರ್ವಪ್ರಾಥಮಿಕ ಹಂತದೊಂದಿಗೆ "ಬುನಾದಿ ವರ್ಷಗಳು" (Foundational years) ಎಂದು ಸೇರಿಸಲಾಗಿದೆ. ಇದರಿಂದ ಆಟವು ಪೂರ್ವಪ್ರಾಥಮಿಕ ಹಂತವನ್ನು ದಾಟಿ ಪ್ರಾಥಮಿಕ ಹಂತವನ್ನೂ ವ್ಯಾಪಿಸುತ್ತದೆ. ಪ್ರಾಥಮಿಕ ಹಾಗು ಹಿರಿಯ ಪ್ರಾಥಮಿಕ ಹಂತಗಳಲ್ಲಿ ಆಟವನ್ನು ಕಲಿಕೆಗಾಗಿ ಬಳಸಲು ಶಿಕ್ಷಕರ ಮನೋಧರ್ಮದಲ್ಲಿ ಆಟವನ್ನು ಬೋಧನಕಲೆಯ ಭಾಗವಾಗಿ ಅಂಗೀಕರಿಸುವ ಬದಲಾವಣೆಯನ್ನು ತರಬೇಕಿದೆ. ಆಟದ ಮೇಲ್ಮುಖ ಸಂಘಟನೆಗಾಗಿ ಶಿಕ್ಷಕರ ಸಾಮರ್ಥ್ಯ ನಿರ್ಮಾಣವನ್ನು ಮಾತ್ರ ಗುರಿಯಾಗಿಸುವುದರಿಂದ ಇದನ್ನು ಸಾಧಿಸಬಹುದಾಗಿದೆ.

**ಪರಾಮರ್ಶನ**

i United Nation Human Rights Office of the High Commissioner. Convention on the Rights of the Child. General Assembly Resolution 44/25 of 20 November 1989. Available at: https://www.ohchr.org/en/professionalinterest/pages/crc.aspx. Accessed April 22, 2021

**ಕೊನೆ ಟಿಪ್ಪಣಿ:**

Ministry of Human Resource Development. (2020). National Education Policy 2020, Delhi. Government of India.

Johnson, J. E., Christie, J. F., & Wardle, F. (2005). Play, development, and early education. Upper Saddle River, NJ: Pearson.

Vygotsky, L. (1978). Mind and society: The development of higher psychological processes. Cambridge, MA: Harvard University Press.



**ಯೋಗೇಶ್ ಜಿ.ಆರ್**. ಅವರು ತೆಲಂಗಾಣ ರಾಜ್ಯದ ಸಂಗಾರೆಡ್ಡಿ ಜಿಲ್ಲೆಯ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ "ಆರಂಭಿಕ ಬಾಲ್ಯ ಶಿಕ್ಷಣ" ಉಪಕ್ರಮದ ಮುಂದಾಳತ್ವ ವಹಿಸಿದ್ದಾರೆ. ಇವರು "ಆರಂಭಿಕ ಬಾಲ್ಯ ಶಿಕ್ಷಣ"ದ ವಿಷಯವಾಗಿ ಸಂಪನ್ಮೂಲ ವ್ಯಕ್ತಿಗಳ ತಂಡವೊಂದರ ಮೇಲ್ವಿಚಾರಣೆಯಲ್ಲಿ ಹಾಗು ಅಂಗನವಾಡಿ ಕಾರ್ಯಕರ್ತರ ಸಾಮರ್ಥ್ಯ ನಿರ್ಮಾಣಕ್ಕಾಗಿ ಅಳತೆಗೆ ತಕ್ಕಂತೆ ಹೊಂದಿಸಿಕೊಳ್ಳಬಹುದಾದ ಬಹು-ರೂಪಾತ್ಮಕ ಸಹಭಾಗಿತ್ವದ ಕಾರ್ಯಕ್ರಮದಲ್ಲಿ ಮಹತ್ತ್ವದ ಪಾತ್ರವಹಿಸಿದ್ದಾರೆ. ಇದಕ್ಕೂ ಮೊದಲು ಪುದುಚೇರಿ ಜಿಲ್ಲಾ ಸಂಸ್ಥೆಯಲ್ಲಿ ಇವರು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಕರ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮದಲ್ಲಿ ಸೇವೆ ಸಲ್ಲಿಸಿದ್ದರು. ಅವರು ಶಿಕ್ಷಣ, ಮಾಹಿತಿ ತಂತ್ರಜ್ಞಾನ ಹಾಗು ಆಡಳಿತ ಕ್ಷೇತ್ರಗಳಲ್ಲಿ ಕಳೆದ 22 ವರ್ಷಗಳಿಂದ ವಿಭಿನ್ನ ಹುದ್ದೆಗಳಲ್ಲಿ ಸಕ್ರಿಯರಾಗಿದ್ದಾರೆ. ಇವರನ್ನು yogesh.r@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಕುಶಾಲ್ ಬಿ.ಎಸ್.** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**